O.S .No. 384/2012

ಪಿ.ಡಬ್ಲ್ಯೂ-1

ದಿನಾಂಕ: 29.06.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

<u>ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಬಿ.ಎಸ್.ವೈ. ವಕೀಲರಿಂದಃ</u>

ನಾನು ಪಿ.ಯು.ಸಿ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನಿಮಗೆ ಕನ್ನಡ ಮತ್ತು ಆಂಗ್ಲ ಭಾಷೆ ಓದಲು, ಬರೆಯಲು ಬರುತ್ತದೆ ಎಂದರೆ ಸರಿ. ನಾನು ಹೆಮ್ಮಿಗೆ ವಾಸ. ವಾದಿಗಳು ಪಿರಿಯಾಪಟ್ಟಣ ತಾಲ್ಲೂಕು, ಕಳ್ಳಿಕೊಪ್ಪಲು ಗ್ರಾಮದ ವಾಸಿಗಳು. ದಾವೆಯ ವಿಚಾರ ವಾದಿಗಳಿಗೂ ಗೊತ್ತು. ವಾದಿಗಳೇ ನ್ಯಾಯಾಲಯದ ಮುಂದೆ ಸಾಕ್ಷ್ಯ ನುಡಿಯಬಹುದಿತ್ತು, ದಾವಾ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ, ನೀವು ಜಿ.ಪಿ.ಎ ಪಡೆದು ನ್ಯಾಯಾಲಯದ ಮುಂದೆ ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಏನೇನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆಂದು ಗೊತ್ತು. ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳನ್ನು ಹೊರತುಪಡಿಸಿ ಬೇರೆ ದಾಖಲಾತಿಗಳು ನಿಮ್ಮ ಬಳಿ ಇದೆಯೇ ಎಂದರೆ ಸಾಕ್ಷಿ ಎಲ್ಲ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ.

ದಾವಾ ಆಸ್ತಿಯ ಹಳೆಯ ಸ.ನಂ.22/6, ಹೊಸ ಸ.ನಂ.68 ಎಂದು ಹೇಳುತ್ತಾರೆ. ಸ.ನಂ.22 ರಲ್ಲಿ ಒಟ್ಟು 125-130 ಎಕರೆ ಜಮೀನು ಇರಬಹುದು. 125-130 ಎಕರೆ ಜಮೀನಿನಲ್ಲಿ ಎಷ್ಟು ದುರಸ್ತು ಆಗಿದೆ ಎಂದರೆ ಸಾಕ್ಷಿ 10-15 ಜನಕ್ಕೆ ಆಗಿರಬಹುದು ಎಂದು ಹೇಳುತ್ತಾರೆ. ದಾವಾ ಆಸ್ತಿ ವಾದಿಗೆ ಹೇಗೆ ಬಂತು ಎಂದರೆ ಸಾಕ್ಷಿ ಹುಚ್ಚೆಗೌಡ ಬಿನ್ ಕಾಳೇಗೌಡ ರವರಿಗೆ ದರಕಾಸ್ತು ಮುಖೇನ ಬಂದಿರುತ್ತದೆ. ಸದರಿಯವರಿಗೆ ಸ.ನಂ.22/6 ರಲ್ಲಿ ಜಮೀನು ಮಂಜೂರಾಗಿರುತ್ತದೆ. ವಾದಿಗಳು ಹಳೆಯ ಸ.ನಂ.22/6, ಹೊಸ ಸ.ನಂ.68 ಜಮೀನನ್ನು ಖರೀದಿಸಿರುತ್ತಾರೆ. ಸಾಕ್ಷಿಗೆ ನಿಪಿ-20 ನ್ನು ತೋರಿಸಿ ಅದರಲ್ಲಿ ಹಳೆಯ ಸ.ನಂ.22/6, ಹೊಸ ಸ.ನಂ.68 ಎಂದು ನಮೂದು ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ಮುಂದಿನ ಕ್ರಯ ಪತ್ರದಲ್ಲಿ ಇದೆ ಎಂದು ಹೇಳುತ್ತಾರೆ. ಮತ್ತೊಂದು ಕ್ರಯ ಪತ್ರ ಎಂದು ಹೇಳಿದ್ದು, ಯಾವುದು ಎಂದರೆ ಸಾಕ್ಷಿ ಕಾಳೇಗೌಡರಿಂದ ಗೌಡಬೋರೇಗೌಡ ರವರಿಗೆ ಕ್ರಯ ಮಾಡಿದ ಕ್ರಯ ಪತ್ರದಲ್ಲಿ ನಮೂದು ಇದೆ ಎಂದು ಹೇಳುತ್ತಾರೆ. ಸಾಕ್ಷಿಗೆ ನಿಪಿ-21 ನ್ನು ತೋರಿಸಿ ಅದರಲ್ಲಿ ಹಳೆಯ

ಸ.ನಂ.22/6, ಹೊಸ ಸ.ನಂ.68 ಎಂದು ನಮೂದು ಇದೆಯಾ ಎಂದರೆ ಸಾಕ್ಷಿ ಚೆಕ್ಕುಬಂಧಿಯಲ್ಲಿ ಬರೆದಿಲ್ಲ, ಮುಂದುವರೆದು ಪೆನ್ಸಿಲ್ ನಲ್ಲಿ ಹೊಸ ಸ.ನಂ.68 ಎಂದು ಬರೆದಿದೆ ಎಂದು ಹೇಳುತ್ತಾರೆ. ಹಳೆಯ ಸ.ನಂ.22/6, ಹೊಸ ಸ.ನಂ.68 ಎಂದು ದುರಸ್ತು ಆದ ಬಗ್ಗೆ ದಾಖಲಾತಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಹಳೆಯ ಸ.ನಂ.22/6, ಹೊಸ ಸ.ನಂ.68 ಎಂದು ಯಾರ ಹೆಸರಿಗೆ ದುರಸ್ತು ಆಯಿತೆಂದರೆ ಸಾಕ್ಷಿ ಗೌಡಬೋರೆಗೌಡನ ಹೆಸರಿಗೆ ಮಾಡಲಾಗಿತ್ತು ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿದ್ದಾರೆ ಎಂದು ಹೇಳುತ್ತಾರೆ. ಸಾಕ್ಷಿಗೆ ತಾನು ಹಾಜರುಪಡಿಸಿರುವ ನಿಪಿ-1 ರಿಂದ 28 ದಾಖಲಾತಿಗಳನ್ನು ಕೊಟ್ಟು, ಅದರಲ್ಲಿ ಗೌಡಬೋರೆಗೌಡನ ಹೆಸರಿಗೆ ದುರಸ್ತು ಆದ ಬಗ್ಗೆ ದಾಖಲಾತಿಯನ್ನು ಗುರುತಿಸುವಂತೆ ಕೇಳಿದ್ದು ಸಾಕ್ಷಿ ಅದರಲ್ಲಿ ಇಲ್ಲ ಎಂದು ಹೇಳುತ್ತಾರೆ. ಗೌಡಬೋರೆಗೌಡನ ಹೆಸರಿಗೆ ದುರಸ್ತು ಆಗಿಲ್ಲ, ಪ್ರತಿವಾದಿಯ ಹೆಸರಿಗೆ ದುರಸ್ತು ಆದ ಸಂಖ್ಯೆಯನ್ನೇ ದಾವೆಯಲ್ಲಿ ನಮೂದಿಸಿ, ಸುಳ್ಳು ದಾವೆ ಹೂಡಿದ್ದೀರಿ ಎಂದರೆ ಸರಿಯಲ್ಲ.

ಸ.ನಂ.22 ರಲ್ಲಿ ಪ್ರತಿವಾದಿಯ ಹೆಸರಿಗೆ ದುರಸ್ತು ಆದ ಸ.ನಂ. ನ್ನು ಕೊಟ್ಟು ಈ ದಾವೆ ಹೂಡಿರುತ್ತೀರಿ ಎಂದರೆ ಸರಿಯಲ್ಲ. ನಿಪಿ-5 ಯಾರ ಹೆಸರಿಗೆ ಇದೆ ಎಂದರೆ ಸಾಕ್ಷಿ ಕಾಳೇಗೌಡ ಬಿನ್ ಡೊಳ್ಳೇಗೌಡ ಎಂಬುದನ್ನು ತಿದ್ದುಪಡಿ ಮಾಡಿ ಡೊಳ್ಳೇಗೌಡ ಬಿನ್ ಕಾಳೇಗೌಡ ಎಂದು ಮಾಡಿಸಿಕೊಂಡಿದ್ದಾರೆ ಎಂದು ಹೇಳುತ್ತಾರೆ. ನಿಪಿ-5 ರ ಕಲಂ 9 ರಲ್ಲಿ ಕಾಳೇಗೌಡ ಬಿನ್ ಡೊಳ್ಳೇಗೌಡ ಕ್ರಯ, ಎಂ.ಆರ್,18/1988-89 ಎಂದು ನಮೂದು ಇದೆ ಎಂದರೆ ಸಾಕ್ಷಿ ದಾಖಲಾತಿಯಲ್ಲಿ ನಮೂದು ಇದೆ ಎಂದು ಹೇಳುತ್ತಾರೆ. ನಿಪಿ-11 ದಾಖಲಾತಿ ಯಾರ ಹೆಸರಿನಲ್ಲಿ ಖಾತೆ ಇದೆ ಎಂದರೆ ಸಾಕ್ಷಿ ಪ್ರತಿವಾದಿಯ ಹೆಸರಿನಲ್ಲಿ ನಮೂದು ಇದೆ ಎಂದು ಹೇಳುತ್ತಾರೆ. ಎಂ.ಆರ್.71/2005-06 ರಂತೆ ಪ್ರತಿವಾದಿಯ ಹೆಸರಿಗೆ ಖಾತೆಯಾಗಿದೆ ಎಂದರೆ ಸರಿ. ಡೊಳ್ಳೇಗೌಡ ಬಿನ್ ಕಾಳೇಗೌಡ ರವರ ಹೆಸರಿಗೆ ಆದ ಎಂ.ಆರ್.18/1988-89 ಖಾತೆಯನ್ನು,ಯಾವುದಾದರೂ ಪ್ರಾಧಿಕಾರದ ಮುಂದೆ ಪ್ರಶ್ನೆ ಮಾಡಿದ್ದೀರಾ ಎಂದರೆ ಸಾಕ್ಷಿ ನಾವು ಕಳ್ಳಿಕೊಪ್ಪಲಿನಲ್ಲಿ ವಾಸವಾಗಿದ್ದರಿಂದ, ಪ್ರಶ್ನೆ ಮಾಡಿಲ್ಲ ಎಂದು ಹೇಳುತ್ತಾರೆ. 2005-06 ರಲ್ಲಿ ಪ್ರತಿವಾದಿಗೆ ಹೆಸರಿಗೆ ಖಾತೆಯಾಗಿದ್ದನ್ನು ಯಾವುದಾದರೂ ಪ್ರಾಧಿಕಾರದ ಮುಂದೆ ಪ್ರಶ್ನೆ ಮಾಡಿದ್ದೀರಾ ಎಂದರೆ ಸಾಕ್ಷಿ ಮಾಡಿಲ್ಲ, ಗೊತ್ತಾಗಲಿಲ್ಲ ಎಂದು ಹೇಳುತ್ತಾರೆ. ಸ.ನಂ.22 ರಲ್ಲಿ ದುರಸ್ತು ಆಗದ ಭೂಮಿಯನ್ನು ಖರೀದಿಸಿ, ದುರಸ್ತು ಆಗಿರುವ ಪ್ರತಿವಾದಿಯ ಜಮೀನಿಗೆ ದಾವೆ ಹೂಡಿರುತ್ತೀರಿ ಎಂದರೆ

ಸರಿಯಲ್ಲ.

ಮೂಲತಃ ಹುಚ್ಚೇಗೌಡ ಬಿನ್ ಕಾಳೇಗೌಡರಿಂದ ಆಸ್ತಿ ಮಂಜೂರಾಗುವ ಕಾಲಕ್ಕೆ ಚೆಕ್ಕುಬಂಧಿಯನ್ನು ನಮೂದಿಸಿ, ನಕಾಶೆಯನ್ನು ಕೊಡಲಾಗಿತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಪ್ರತಿವಾದಿಯ ಮಾವನ ಹೆಸರು ಕಾಳೇಗೌಡ ಹಾಗೂ ನೀವು ಖರೀದಿಸಿರುವ ಖರೀದಿದಾರನ ಹೆಸರು ಕಾಳೇಗೌಡ ಆಗಿರುವುದರಿಂದ, ಹೆಸರನ್ನು ದುರುಪಯೋಗಪಡಿಸಿಕೊಂಡು ಸುಳ್ಳು ದಾವೆ ಹೂಡಿದ್ದೀರಿ ಎಂದರೆ ಸಾಕ್ಷಿ ಪ್ರತಿವಾದಿ ದುರುಪಯೋಗಪಡಿಸಿಕೊಂಡು ಖಾತೆ ಮಾಡಿಸಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಪ್ರತಿವಾದಿ ಖಾತೆ ಮಾಡಿಸಿಕೊಂಡಿರುವ ಬಗ್ಗೆ ಯಾವುದಾದರೂ ಪ್ರಾಧಿಕಾರದ ಮುಂದೆ ಪ್ರಶ್ನೆ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

ವಾದಿಗಳು ನನ್ನ ಸಂಬಂಧಿಗಳು. 1 ನೇ ವಾದಿಯ ಹೆಂಡತಿಯ ತಂಗಿಯನ್ನು ನನ್ನ ಅಣ್ಣ ಮದುವೆಯಾಗಿರುತ್ತಾನೆ. ನಿಪಿ-1 ರಲ್ಲಿ ವಾದಿಗಳು ನಿಮ್ಮ ಸಂಬಂಧಿಗಳು ಎಂದು ಬರೆಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನಿಪಿ-1 ನ್ನು ವಾದಿಗಳು 2013 ರಲ್ಲಿ ಬರೆದುಕೊಟ್ಟಿರುತ್ತಾರೆ. 2013 ಕ್ಕಿಂತ ಮುಂಚಿತವಾಗಿ ಏನಾಯಿತು ಎಂದು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ 2012 ರಲ್ಲಿ ಗೊತ್ತು ಎಂದು ಹೇಳುತ್ತಾರೆ. ನಿಪಿ-1 ನ್ನು 2014 ರಲ್ಲಿ ಬರೆದುಕೊಟ್ಟಿರುವುದು, 2013 ರಲ್ಲಿ ಅಲ್ಲ ಎಂದರೆ ಸಾಕ್ಷಿ ದಿನಾಂಕ ನೋಡಿಲ್ಲ ಎಂದು ಹೇಳುತ್ತಾರೆ. ದಾವೆಯ ವಿಚಾರ ನಿಮಗೆ ಗೊತ್ತಿಲ್ಲದೇ ಇದ್ದರೂ, ಪ್ರತಿವಾದಿ ಹಾಗೂ ನೀವು ಒಂದೇ ಊರಿನವರಾಗಿರುವುದರಿಂದ, ಹಳೆಯ ವೈಮನಸ್ಸು ಇರುವುದರಿಂದ, ಪ್ರತಿವಾದಿಯ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ, ಆಲಿಸಿ ಅನುಮತಿಸಲಾಯಿತು.)**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.